ಮೇಲೆ ಅನುಷ್ಠಾನಗೊಳಿಸಲು ನಿರ್ಣಯಿಸಲಾಗಿದೆ. ಅದರಂತೆ ಯೋಜನೆಗಳ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

a) Rs.2.00 crores per scheme is earmarked for these two schemes in Action Plan for 2012-13.

b) In the State Level Scheme Sanctioning Committee SLSSC) meeting held on 01-10-2011, it was decided to adopt DBOT system for the Schemes costing above Rs.25.00 crores. Accordingly the tender process is going on.

771 ಶ್ರೀ ಸಂಗಮೇಶ್ವರ ಬಿ.ಕೆ. (ಭದ್ರಾವತಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಭದ್ರಾವತಿ ತಾಲ್ಲೂಕಿನ ದೊಣಬಘಟ್ಟ ಮತ್ತು ಕಾಗೇಕೊಡುಮಗ್ಗೆ ಭದ್ರಾನದಿ ಹರಿದು ಹೋಗಿದ್ದು, ಗ್ರಾಮಸ್ಥರು ಓಡಾಡಲು ನದಿ ದಾಟಿಕೊಂಡು ಹೋಗಲು ಸಾಧ್ಯವಾಗುತ್ತಿಲ್ಲ, ಆದ್ದರಿಂದ ಸಂಪರ್ಕಕ್ಕೆ ಹೊಸ ಸೇತುವೆ ನಿರ್ಮಾಣ ಮಾಡಲು ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದೇ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಪ್ರಸ್ತಾಪಿತ ಸೇತುವೆಯನ್ನು ಭದ್ರಾ ನದಿಗೆ ಅಡ್ಡಲಾಗಿ ಭದ್ರಾವತಿ ತಾಲ್ಲೂಕಿನ ಕಾಗೆಕೋಡುಮಗ್ಗೆ ಗ್ರಾಮದ ಹತ್ತಿರ ನಿರ್ಮಿಸಬೇಕಾಗಿರುತ್ತದೆ. ಈ ಸೇತುವೆಯ ಅಪ್ರೋಚ್ ರಸ್ತೆಯು ನದಿಯ ಬಲದಂಡೆಯ ಕಡೆಯಿಂದ ಭದ್ರಾವತಿ–ಹೊಳೆಹೊನ್ನೂರು ಜಿಲ್ಲಾ ಮುಖ್ಯರಸ್ತೆಗೆ (ಕಾಗೇಕೊಡಮಗ್ಗೆ ಗ್ರಾಮದ ಕಡೆಗೆ) 0.40 ಕಿಮೀ ಉದ್ದ ಹಾಗೂ ನದಿಯ ಎಡದಂಡೆಯ ಕಡೆಯಿಂದ ತಡಸ–ದೊಣಬಘಟ್ಟ ಜಿಲ್ಲಾ ಮುಖ್ಯ ರಸ್ತೆಗೆ (ದೊಣಬಘಟ್ಟ ಗ್ರಾಮದ ಕಡೆಗೆ) 1.20 ಕಿಮೀ ಉದ್ದವಿರುತ್ತದೆ.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸದರಿ ಸೇತುವೆ ನಿರ್ಮಾಣದ ಸ್ಥಳವು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ಯಾವುದೇ ರಸ್ತೆಯಲ್ಲಿ ಬರುವುದಿಲ್ಲ. ಆದಾಗ್ಯೂ ಈ ಸೇತುವೆ ಮತ್ತು

ಅಪ್ರೋಚ್ ರಸ್ತೆಯನ್ನು ನಿರ್ಮಿಸಿದಲ್ಲಿ ಎರಡೂ ಕಡೆಯಲ್ಲಿ ಇರುವ ಜಿಲ್ಲಾ ಮುಖ್ಯ ರಸ್ತೆಗಳಿಗೆ ಸಂಪರ್ಕವೇರ್ಪಡುತ್ತದೆ.

ಸದರಿ ಸೇತುವೆಯ ನಿರ್ಮಾಣಕ್ಕೆ ರೂ.15.00 ಕೋಟಿಗಳ ಅನುದಾನದ ಅವಶ್ಯಕತೆಯಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ.

801 ಶ್ರೀ ತುಕಾರಾಮ್.ಇ : ಮಾನ್ಯ ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಸಹಾಯಕ ತೋಟಗಾರಿಕೆ ನಿರ್ದೇಶಕರ ಹುದ್ದೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಖಾಲಿ ಹುದ್ದೆಯನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಎಸ್.ಎ. ರವೀಂದ್ರನಾಥ್ (ಸಕ್ಕರೆ ಮತ್ತು ತೋಟಗಾರಿಕೆ ಸಚಿವರು) :

ಅ) ಹೌದು.

Yes.

ಆ) ಹಾಲಿ ತೋಟಗಾರಿಕೆ ಇಲಾಖೆಯಲ್ಲಿ 70 ಸಹಾಯಕ ತೋಟಗಾರಿಕೆ ನಿರ್ದೇಶಕರ ಹುದ್ದೆಗಳು ಖಾಲಿ ಇರುತ್ತವೆ. ಇದರಲ್ಲಿ 47 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಹುದ್ದೆಗಳ ಭರ್ತಿಗೆ ಆರ್ಥಿಕ ಇಲಾಖೆಯ ಸಹಮತಿ ಅಗತ್ಯವಿರುವುದರಿಂದ ಸದರಿ ಇಲಾಖೆಯೊಡನೆ ಹುದ್ದೆ ಭರ್ತಿಗೆ ಸಮಾಲೋಚಿಸಿ ನೇರ ನೇಮಕಾತಿ ಮೂಲಕ 47 ಸಹಾಯಕ ತೋಟಗಾರಿಕೆ ನಿರ್ದೇಶಕ ಹುದ್ದೆಗಳನ್ನು ಕೆ.ಪಿ.ಎಸ್.ಸಿ. ಮೂಲಕ ಭರ್ತಿ ಮಾಡಲು ಕ್ರಮ ವಹಿಸಲಾಗುವುದು. ಉಳಿದ 23 ಹುದ್ದೆಗಳನ್ನು ನಿಯೋಜನೆ ಹಾಗೂ ಉನ್ನತ ವ್ಯಾಸಂಗಕ್ಕೆ ತೆರಳಿದ ಅಧಿಕಾರಿಗಳಿಗೆ ಕಾಯ್ದಿರಿಸಲಾಗಿದೆ.

At present there are 70 vacancies in the cadre of Assistant Director of Horticulture in the department, out of which, 47 posts are required to be filled through direct recruitment which proposal is under consideration of Govt. As filling up of posts requires FD's approval, action will be taken in consultation with FD, to fill up 47 posts of AHD through KPSC by direct recruitment, Re,aomomg 23 posts have been